# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:225 • ನೋಂದಣಿ ನಂ.:KARKAN27911 • ವಿಜಯನಗರ • 01.02.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:225 • Reg.No:KARKAN27911 • VIJAYANAGARA • 01.02.2024 • Thursday • Page:04 • Rs:2


**ಮೈಕ್ರೋ ನ್ಯೂಸ್**

## ಹೊಸಪೇಟೆ-ಹಂಪಿ ಉಚಿತ ಬಸ್ ವ್ಯವಸ್ಥೆಗೆ ಚಾಲನೆ ಫೆ.2ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ-2024ರ ನಿಮಿತ್ಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಹೊಸಪೇಟೆ ವಿಭಾಗದಿಂದ ಫೆಬ್ರವರಿ 2ರಿಂದ 4ರವರೆಗೆ ಮುರು ದಿನಗಳ ಕಾಲ ಹೊಸಪೇಟೆ-ಹಂಪಿ 40 ಉಚಿತ ಬಸ್ ವ್ಯವಸ್ಥೆಗೆ ವಿಜಯನಗರ ಶಾಸಕ ಹೆಚ್.ಆರ್.ಗವಿಯಪ್ಪ ಫೆ. 02ರಂದು ಚಾಲನೆ ನೀಡುವರು.

ಕಂಪ್ಲಿ ಸೇರಿದಂತೆ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ 300 ಬಸ್‌ಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಫೆ.2ರಂದು ಹೊಸಪೇಟೆ ತಾಲ್ಲೂಕಿನಿಂದ 30, ಕೂಡ್ಲಿಗಿ 40, ಹಡಗಲಿ 30, ಹಗರಿಬೊಮ್ಮನಹಳ್ಳಿ 30, ಹರಪ್ಪನಹಳ್ಳಿ 40, ಕಂಪ್ಲಿ-130 ಬಸ್‌ಗಳ ವ್ಯವಸ್ಥೆಯನ್ನು ಕ.ಕ.ರ.ಸಾ ನಿಗಮ ಹೊಸಪೇಟೆ ವಿಭಾಗದ ವಿಭಾಗಿಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






# ಉತ್ಸವದಲ್ಲಿ ಅರಳಲಿದೆ ಹಂಪಿ ಕಲಾವೈಭವ



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವಕ್ಕೆ ಕ್ಷಣಗಣನೆ ಆರಂಭವಾಗಿದೆ. ನಾಲ್ಕು ವೇದಿಕೆಗಳ ಪೈಕಿ ಗಾಯತ್ರಿ ಪೀಠದ ಬಳಿ ನಿರ್ಮಿಸಲಾಗುತ್ತಿರುವ ಮುಖ್ಯವೇದಿಕೆ ಹಂಪಿಯ ಕಲಾ ವೈಭವವನ್ನೆ ನೆನಪಿಸಲಿದೆ. ವೇದಿಕೆಯಲ್ಲಿ ಗಜರಾಜ, ಉಗ್ರನರಸಿಂಹ, ಕಲ್ಲಿನರಥ, ವಿಜಯವಿಠಲ ದೇವಸ್ಥಾನ ಸಂಗೀತ ಕಂಬಗಳು, ವಿಜಯನಗರ ಸಾಮ್ರಾಜ್ಯದ ಲಾಂಛನ ಹಿಡಿದ ಸೇನಾಪಡೆ, ಎರಡೂ ಬದಿಯಲ್ಲಿ ವಿಜಯನಗರದ ಅರಸ ಶ್ರೀಕೃಷ್ಣದೇವರಾಯ ಚಿತ್ರಗಳು ಪ್ರೇಕ್ಷಕರ ಗಮನ ಸೆಳೆಯುವಂತೆ ಬೃಹತ್ ವೇದಿಕೆ ನಿರ್ಮಾಣಗೊಳ್ಳುತ್ತಲಿದೆ.




ಫೆ.2, 3 ಮತ್ತು 4ರಂದು ನಡೆಯಲಿರುವ ಐತಿಹಾಸಿಕ ಪ್ರಸಿದ್ಧ ಹಂಪಿ ಉತ್ಸವದ ಅಂತಿಮ ಹಂತದ ಸಿದ್ಧತೆಗಳನ್ನು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಬುಧವಾರ ಭೇಟಿ ನೀಡಿ ಪರಿಶೀಲಿಸಿದರು. ಮುಖ್ಯ ವೇದಿಕೆಯ ಸಿದ್ಧತೆ, ಮಾಧ್ಯಮ ಕೇಂದ್ರ, ಗಣ್ಯರು, ಸಾರ್ವಜನಿಕರಿಗೆ ಕೂಡುವ ಆಸನಗಳ ವ್ಯವಸ್ಥೆ, ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನು ವೀಕ್ಷಿಸಿ ಅಗತ್ಯ ಮಾಹಿತಿ ಪಡೆದು, ಸಲಹೆ ಸೂಚನೆಗಳನ್ನು ನೀಡಿದರು.

ಇದೆ ವೇಳೆ ಜಿಲ್ಲಾಧಿಕಾರಿಗಳು ಮಾತನಾಡಿ, ಹಂಪಿ ಉತ್ಸವಕ್ಕೆ ಎಲ್ಲಾ ರೀತಿಯ ವ್ಯವಸ್ಥೆಗಳು ಮಾಡಿಕೊಳ್ಳಲಾಗಿದೆ. ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ವೈಭವನ್ನು ಸಾರುವ ಈ ಕಾರ್ಯದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಕರ್ಷಕ ಕಾರ್ಯಕ್ರಮಗಳು ನಡೆಯಲಿವೆ. ಜಿಲ್ಲೆಯ ಎಲ್ಲಾ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಿಪಂ ಸಿಇಒ ಸದಾಶಿವ ಪ್ರಭು ಬಿ.ವ, ಎಸ್ಪಿ ಶ್ರೀಹರಿಬಾಬು ಬಿ.ಎಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಈಬಾರಿ ಮಫ್ತಿಯಲ್ಲಿ ಪೊಲೀಸ್ ಪಡೆ

ಹಂಪಿ ಉತ್ಸವದಲ್ಲಿ ಶಾಂತಿ ಹಾಗೂ ಸುರಕ್ಷತೆಗಾಗಿ ಪೊಲೀಸ್ ಇಲಾಖೆಯಿಂದ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಹೊರ ಜಿಲ್ಲೆಗಳು ಹಾಗೂ ಇತರೆ ರೇಂಜ್‌ಗಳಿಂದ 4 ಜನ ಎ.ಸಿ.ಪಿ.ಗಳು, 4 ಹೆಚ್ಚುವರಿ ಪೊಲೀಸ್ ವೀಕ್ಷಕರು, 8 ಡಿ.ವೈ.ಎಸ್.ಸಿ., 32 ಇನ್ಸ್‌ಪೆಕ್ಟರ್, ಮಹಿಳಾ ಸಿಬ್ಬಂದಿಗಳು ಒಳಗೊಂಡತೆ 179 ಎ.ಎಸ್.ಐ., 910 ಹೆಡ್ ಕಾನ್ಸ್‌ಟೇಬಲ್, 500 ಜನ ಗೃಹ ರಕ್ಷಕದಳ, 100 ಜನ ಮಹಿಳಾ ಸಿಬ್ಬಂದಿ ಸೇರಿದಂತೆ 4 ಕೆ.ಎಸ್.ಆರ್.ಪಿ., 2 ಡಿ.ಆರ್., ಶ್ವಾನದಳ ನಿಯೋಜನೆ ಮಾಡಲಾಗಿದೆ.,

**19 ಪಾರ್ಕಿಂಗ್ ಸ್ಥಳ:** ವಾಹನಗಳ ಪಾರ್ಕಿಂಗ್‌ಗಾಗಿ 19 ಸ್ಥಳಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಮೊದಲ ಬಂದವರಗಿ ವೇದಿಕೆ ಸಮೀದ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ ಮಾಡಬಹುದು. ಒನ್-ವೇ ವ್ಯವಸ್ಥೆ ಸಹ ಜಾರಿ, ಐದು ಸ್ಥಳಗಳಲ್ಲಿ ತುರ್ತು ಸ್ಪಂಧನೆ ಘಟಕಗಳ ಪ್ರಾರಂಭಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ತುರ್ತು ಸೇವೆಗಾಗಿ 112ಕ್ಕೆ ಕರೆ ಮಾಡಬೇಕು. ಪೊಲೀಸರು ಮಫ್ತಿನಲ್ಲು (ಸಿವಿಲ್ ಡರ್ಸ್) ಕಾರ್ಯನಿರ್ವಹಿಸುವರು ಎಂದು ಎಸ್ಪಿ ಶ್ರೀಹರಿ ಬಾಬು ತಿಳಿಸಿದರು.

# ಫೆ.2ಕ್ಕೆ ವಿಚಾರ ಗೋಷ್ಠಿ, ಫೆ.4ಕ್ಕೆ ಮಕ್ಕಳ, ಯುವಗೋಷ್ಠಿ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತದ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಹಂಪಿ ಉತ್ಸವದ ಅಂಗವಾಗಿ ವಿಚಾರ ಗೋಷ್ಠಿಯನ್ನು ಫೆಬ್ರವರಿ 2ರಂದು ಮತ್ತು ಮಕ್ಕಳ ಹಾಗೂ ಯುವ ಕವಿಗೋಷ್ಠಿಯನ್ನು ಫೆ.4ರಂದು ಹಂಪಿಯ ವಿರೂಪಾಕ್ಷೇಶ್ವರ ದೇವಸ್ಥಾನ ವೇದಿಕೆಯಲ್ಲಿ ನಡೆಯಲಿದೆ.

**ವಿಚಾರ ಗೋಷ್ಠಿ:** ವಿಚಾರ ಗೋಷ್ಠಿಯು ಫೆ.2ರಂದು ಬೆಳಿಗ್ಗೆ 10.30ಕ್ಕೆ ಹಂಪಿಯ ವಿರೂಪಾಕ್ಷೇಶ್ವರ ದೇವಸ್ಥಾನ ವೇದಿಕೆಯಲ್ಲಿ ನಡೆಯಲಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಾದ ಕೊಟ್ಟೂರಿನ ಕುಂ ವೀರಭದ್ರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸುವರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಕೆ.ರವೀಂದ್ರನಾಥ ಅವರು ಅಧ್ಯಕ್ಷತೆ ವಹಿಸುವರು. ಹಡಗಲಿಯ ಪ್ರಾಚಾರ್ಯರಾದ ಎಸ್.ಎಸ್ ಪಾಟೀಲ್ ಅವರಿಂದ ಪ್ರಾಸ್ತಾವಿಕ ನುಡಿ, ಹೊಸಪೇಟೆ ಕನ್ನಡ ಸಾಹಿತ್ ಪರಿಷತ್ ಅಧ್ಯಕ್ಷರಾದ ನಾಯಕರ ಹುಲುಗಪ್ಪ ಅವರು ಉಪಸ್ಥಿತರಿರುವರು. ಉಪನ್ಯಾಸಕರಾದ ಡಾ ಜಗದೀಶಚಂದ್ರ ಬೋಸ್ ಹಾಗೂ ಲೇಖಕಿ ಕವಿತಾ ಕಟ್ಟೆಗೌಡರು ಅವರು ಕಾರ್ಯಕ್ರಮ ನಿರೂಪಿಸುವರು. ಈ ಕಾರ್ಯಕ್ರಮದಲ್ಲಿ ಹಲವು ವಿದ್ವಾಂಸರು ಪಾಲ್ಗೊಳ್ಳಲಿದ್ದಾರೆ.


**ಮಕ್ಕಳ ಹಾಗೂ ಯುವ ಗೋಷ್ಠಿ:** ಮಕ್ಕಳ ಹಾಗೂ ಯುವ ಗೋಷ್ಠಿಯು ಫೆ.4ರಂದು 10.30ಕ್ಕೆ ಹಂಪಿಯ ವಿರೂಪಾಕ್ಷೇಶ್ವರ ದೇವಸ್ಥಾನ ವೇದಿಕೆಯಲ್ಲಿ ನಡೆಯಲಿದ್ದು, ಬಳ್ಳಾರಿ ಮಕ್ಕಳ ಸಾಹಿತಿಗಳಾದ ಡಾ ಕೆ.ಶಿವಲಿಂಗಪ್ಪ ಹಂದಿಹಾಳ ಅವರು ಕಾರ್ಯಕ್ರಮ ಉದ್ಘಾಟಿಸುವರು. ಚಿಂತಕರಾದ ಅಬ್ದುಲ್ ಹೈ ತೋರಣಗಲ್ ಅಧ್ಯಕ್ಷತೆ ವಹಿಸುವರು. ಬಳ್ಳಾರಿಯ ವಿ.ಎಸ್.ಕೆ. ವಿವಿಯ ಸಿಂಡಿಕೇಟ್ ವಿಶ್ರಾಂತ ಸದಸ್ಯರಾದ ಡಾ ಬಸವರಾಜ ಪೂಜಾರ ಅವರು ಉಪಸ್ಥಿತರಿರುವರು. ಹೊಸಪೇಟೆ ವಿಜಯನಗರ ಕಾಲೇಜಿನ ಉಪನ್ಯಾಸಕರಾದ ನಾಗರತ್ನ ಅವರು ಕಾರ್ಯಕ್ರಮ ನಿರೂಪಿಸುವರು. ಈ ಕಾರ್ಯಕ್ರಮದಲ್ಲಿ ಕವಿಗಳು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.






# ಹಂಪಿ ತುಂಗಭದ್ರೆಗೆ ತುಂಗಾರತಿ





**ಹಂಪಿ ಟೈಮ್ಸ್ ಹೊಸಪೇಟೆ**



ಹಂಪಿ ಉತ್ಸವಕ್ಕೂ ಮುನ್ನ ಹಂಪಿ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಪಕ್ಕದಲ್ಲಿ ಹರಿಯುವ ತುಂಗಭದ್ರಾ ನದಿಗೆ ಬುಧವಾರ ಸಂಜೆ ಶಾಸಕ ಎಚ್.ಆರ್.ಗವಿಯಪ್ಪ ಮತ್ತು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೇರಿದಂತೆ ಜನಪ್ರತಿನಿಧಿಗಳು, ಅಧಿಕಾರಿಗಳಿಂದ ತುಂಗಾರತಿ ಪೂಜಾ ಕಾರ್ಯಕ್ರಮಗಳು ಜರುಗಿದವು.

ಶಾಸಕ ಎಚ್.ಆರ್.ಗವಿಯಪ್ಪ ಮಾತನಾಡಿ, ನಾಡಿನಲ್ಲಿ ಉತ್ತಮ ಮಳೆಯಾಗಿ ನದಿ, ಹಳ್ಳ-ಕೊಳ್ಳ, ಕೆರೆಗಳು ತುಂಬಿ ರೈತರ ಬೆಳೆಗಳು ಸಮೃದ್ಧಿಯಾಗಿ ರೈತರ ಸಂಕಷ್ಟಗಳು ಕರಗಲಿ ಎಂದು ಶ್ರೀ ಭುವನೇಶ್ವರಿ ದೇವಿಯಲ್ಲಿ ಪ್ರಾರ್ಥಿಸಿ ತುಂಗಾರತಿ ಪೂಜೆ ಸಲ್ಲಿಸಲಾಗಿದೆ. ಹಂಪಿ ಉತ್ಸವದಲ್ಲಿ ತುಂಗಾರತಿಯಲ್ಲಿ ತುಂಗಭದ್ರೆಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಬಾಗೀನ ಅರ್ಪಿಸಲಾಗಿದೆ. ಧಾರ್ಮಿಕ ಆಚರಣೆಗಳು ಸಂಪ್ರದಾಯಗಳನ್ನು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯಗಳಲ್ಲಿ ಇದು ಒಂದಾಗಿದೆ ಎಂದರು.

ಜಿಲ್ಲಾದಿಕಾರಿಗಳು ತುಂಗಭದ್ರೆಗೆ ಪೂಜೆ ಸಲ್ಲಿಸಿ ಆರತಿ ಬೆಳಗಿದರು. ಅಪರ ಜಿಲ್ಲಾಧಿಕಾರಿ ಜಿ.ಅನುರಾಧ, ಸಿಇಒ ಸದಾಶಿವ ಪ್ರಭು, ಡಿವೈಎಸ್ಪಿ ಸೇರಿದಂತೆ ಅಧಿಕಾರಿಗಳು, ಅರ್ಚಕರು ಇತರರಿದ್ದರು. ಪೂಜೆಗೆ ಮುನ್ನ ದೇವಸ್ಥಾನದಿಂದ ಕಲಾತಂಡಗಳ ವಾದ್ಯಮೇಳಗಳೊಂದಿಗೆ ಆನೆಲಕ್ಷ್ಮಿಯೊಂದಿಗೆ ನದಿಗೆ ಆಗಮಿಸಿದರು. ಯುವತಿಯರು ವಾದ್ಯಗಳಿಗೆ ಹೆಜ್ಜೆ ಹಾಕಿದರು.

